# ಅವರು ಕೊಲ್ಲುತ್ತಿದ್ದರು ನಾವು ಪಟ ತೆಗೆಯುತ್ತಿದ್ದೆವು

## ಕೀನ್ಯಾದ ಫೋಟೋಜರ್ನಲಿಸ್ಟ್ ಅನಿಲ್ ವಿದ್ಯಾರ್ಥಿ ಸಂದರ್ಶನ



**ರಹಮತ್ ತರೀಕೆರೆ**

ಚಿತ್ರಗಳು: ಅನಿಲ್ ವಿದ್ಯಾರ್ಥಿ

ಹಂಪಿ ಸ್ಮಾರಕಗಳ ಫೋಟೋಗಳಿಗಾಗಿ ಪ್ರಸಿದ್ಧರಾಗಿರುವ ಮಿತ್ರ ಶಿವಶಂಕರ ಬಣಗಾರ ಅವರು, ಒಂದು ದಿನ ಕರೆ ಮಾಡಿದರು. ಕೀನ್ಯಾದಿಂದ ಅನಿಲ್ ವಿದ್ಯಾರ್ಥಿ ಎಂಬ ಫೋಟೋ ಜರ್ನಲಿಸ್ಟ್ ಹಂಪಿಗೆ ಬಂದಿದ್ದಾರೆಂದೂ, ಅವರು ಕೀನ್ಯಾದ ಸ್ವಾತಂತ್ರ್ಯ ಹೋರಾಟದ ಕುಟುಂಬದವರೆಂದೂ, ಕೀನ್ಯಾದ ಪ್ರಸಿದ್ಧ ಲೇಖಕ ಗೂಗಿ ವಾ ಥಿಯಾಂಗೊ ಅವರ ಪರಿಚಿತರೆಂದೂ ಹೇಳಿದರು. ಗೂಗಿ, ನನ್ನ ಪ್ರಿಯ ಲೇಖಕರಲ್ಲಿ ಒಬ್ಬರು. ಅವರ 'ಡಿಕಲೊನೈಜಿಂಗ್ ದಿ ಮೈಂಡ್' ಕೃತಿಯನ್ನು ಮೂವತ್ತು ವರ್ಷಗಳ ಹಿಂದೆ ಅನುವಾದಿಸಿದ್ದೆ. ಭಾಷೆ ಮತ್ತು ರಾಜಕಾರಣ ಕುರಿತ ಅವರ ಚಿಂತನೆ ನನ್ನನ್ನು ಪ್ರಭಾವಿಸಿತ್ತು. ಕೂಡಲೇ 'ನಾಳೆ ನಮ್ಮ ಮನೆಯಲ್ಲಿ ಊಟ–ಚರ್ಚೆ ಇರಿಸಿಕೊಳ್ಳೋಣ. ದಯುವಿಟ್ಟು ಕರೆತನ್ನಿ' ಎಂದೆ. ಆ ದಿನ ಹಂಪಿಯಲ್ಲಿ ಮೋಡ ಮುಸುಕಿ, ಜಿಟಿಜಿಟಿ ಮಳೆ ಹಿಡಿದುಕೊಂಡು ಫೋಟೊಗ್ರಫಿಗೆ ಬೆಳಕಿನ ಅಭಾವ ಸೃಷ್ಟಿಸಿತ್ತು. ಹೋಟೆಲು ಕೋಣೆಯಲ್ಲಿ ಬಂಧಿಯಾಗಿದ್ದ ಅನಿಲ್, ನನ್ನ ಕೋರಿಕೆಯನ್ನು ಸಂತೋಷದಿಂದ ಒಪ್ಪಿಕೊಂಡು ಬಂದರು. ಎಂಬತ್ತೆರಡು ವರ್ಷ ದಾಟಿವೆ ಅನಿಸಲಿಲ್ಲ. ನನ್ನ ಅನುವಾದ ಕೃತಿ 'ವಸಾಹತು ಪ್ರಜ್ಞೆ ಮತ್ತು ವಿಮೋಚನೆ'ಯನ್ನು ಕೊಟ್ಟು ಬರಮಾಡಿಕೊಂಡೆ. ಅನಿಲ್ ನಮ್ಮ ಮನೆಯಲ್ಲಿ ಇಡೀ ದಿನವಿದ್ದು ತಮ್ಮ ಅನುಭವ ಹಂಚಿಕೊಂಡರು.